ನಿಮ್ಮೊಡನೆ

# ಚರ್ಚೆ ಜನಜೀವನಕ್ಕೆ ಸಂಬಂಧಿಸಿರಲಿ

ಬಂಕಿಮ್ ಚಂದ್ರ ಚಟರ್ಜಿ ಅವರು ರಚಿಸಿದ 'ವಂದೇ ಮಾತರಂ' ಹಾಡಿನ ಕುರಿತು ಸಂಸತ್ತಿನಲ್ಲಿ ಸುದೀರ್ಘ ಚರ್ಚೆ ನಡೆಯಿತು. ತಾಯಿಯನ್ನು ನಮಿಸುವೆ ಅರ್ಥದ ಈ ಪದ್ಯದ ಎರಡು ಪ್ಯಾರಾಗಳನ್ನು ಅವರು ಮೊದಲು ಬರೆದಿದ್ದು. ನಂತರ ಆನಂದಮಠ ಕಾದಂಬರಿಯಲ್ಲಿ ಇನ್ನೆರಡು ಚರಣಗಳನ್ನು ಸೇರಿಸುತ್ತಾರೆ. ಇದೆಲ್ಲವೂ ಇತಿಹಾಸ.

'ವಂದಿಪೆನು ತಾಯಿಯನು...' ಎಂಬರ್ಥದ ಎರಡು ಚರಣಗಳು ಭೂಮಿಯನ್ನು ಉದ್ದೇಶಿಸಿದಂತೆ ಇರುವುದರಿಂದ ಇದನ್ನು ರಾಷ್ಟ್ರೀಯ ಗೀತೆಯಾಗಿ, ಘೋಷಣೆಯಾಗಿ ಬಳಸಲಾಯಿತು. ಇದೆಲ್ಲವೂ ಇತಿಹಾಸ.

ಈಗ ಮತ್ತೆ ಮುಂಬರಲಿರುವ ಚುನಾವಣೆಯಲ್ಲಿ ಈ ಗೀತೆಯನ್ನೇ ವಿವಾದದ ವಸ್ತುವಾಗಿ ಮಾಡುವ ಎಲ್ಲ ಲಕ್ಷಣಗಳೂ ಸಂಸತ್ತಿನಲ್ಲಿ ನಡೆದ ಚರ್ಚೆಯಿಂದ ವೇದ್ಯವಾಗಿದೆ. ರಾಜಕಾರಣವನ್ನು ಬದಿಗಿರಿಸಿ ನೋಡಿದರೆ ಈ ಸುದೀರ್ಘ ಚರ್ಚೆಯಿಂದ ಸಾಮಾನ್ಯರ ಬದುಕಿಗೆ ಏನಾದರೂ ಲಾಭವಾಗಿದೆಯೇ?

ಪ್ರಜೆಗಳಿಂದ ಆಯ್ಕೆಯಾಗಿ ಹೋದ ಪ್ರತಿನಿಧಿಗಳು ಅಧಿವೇಶನದಲ್ಲಿ ಜನ ಸಾಮಾನ್ಯರ ಸಮಸ್ಯೆಗಳಿಗಾಗಿ ಧ್ವನಿ ಎತ್ತಬೇಕು. ಜನರ ಅನುಕೂಲಕ್ಕಾಗಿ ಶ್ರಮಿಸಬೇಕು. ಆದರೆ ಇಲ್ಲಿ ಪದ್ಯವೊಂದರ ಚರಣಗಳ ಕಾಲ ಮತ್ತು ಅದರ ಉದ್ದೇಶವನ್ನಿರಿಸಿಕೊಂಡು ಚರ್ಚೆಯಾಗಿದೆ.

ಇದೇ ಸಮಯದಲ್ಲಿ ಉದ್ಯೋಗಾವಕಾಶಗಳ ಸೃಷ್ಟಿಯ ಕುರಿತು ಚರ್ಚೆಯಾಗಬಹುದಿತ್ತು. ಇಂಡಿಗೋ ವಿಮಾನ ತಂದಿರಿಸಿರುವ ಸಂಕಷ್ಟದ ಕುರಿತು ಚರ್ಚೆಯಾಗಬಹುದಿತ್ತು. ಸಿಬ್ಬಂದಿ ಕೊರತೆಯೆಂಬ ಕಾರಣಕ್ಕೆ ನೇಮಕಾತಿಯ ಪರಿಹಾರ ಹುಡುಕಬಹುದಿತ್ತು. ದೇಶದಲ್ಲಿ ನಿರುದ್ಯೋಗ, ಬಂಡವಾಳಶಾಹಿಗಳಿಂದ ಆಗುತ್ತಿರುವ ತೊಂದರೆಗಳೆಲ್ಲವನ್ನೂ ಬದಿಗಿರಿಸಿ, ಹಾಡುಗಳ ಎರಡು ಚರಣಗಳ ಬಗ್ಗೆ ಇಷ್ಟು ಸುದೀರ್ಘ ಚರ್ಚೆ ಬೇಕಿತ್ತಾ?

'ವಂದೇ ಮಾತರಂ' ಎಂಬುದು ನಮ್ಮೆಲ್ಲರ ಪಾಲಿನ ಶುಭೋದಯವಾಗಿದೆ. ಟೀವಿ, ರೇಡಿಯೊಗಳಲ್ಲಿ ಈ ಹಾಡು ಕೇಳದೆ ಬೆಳಗಾಗದು ಎಂಬಂಥ ಪೀಳಿಗೆ ಒಂದು ಈಗಲೂ ಸಂಸತ್ತಿನಲ್ಲಿದೆ. ದೊಡ್ಡ ತಲೆಮಾರೊಂದು ಭಾರತದಲ್ಲಿದೆ. ಆ ಗೀತೆ ಎಂದಿಗೂ ನೇಪಥ್ಯಕ್ಕೆ ಸರಿಯದು. ತನ್ನ ಮಹತ್ವವನ್ನು ಕಳೆದುಕೊಳ್ಳುವುದಿಲ್ಲ. ನೂರೈವತ್ತು ವರ್ಷಗಳಾಚರಣೆಯ ಸಂದರ್ಭದಲ್ಲಿ ಈ ಹಾಡನ್ನು ಇಂದಿನ ಪೀಳಿಗೆಗೆ ಕೇಳಿಸುವುದರಲ್ಲಿ ತೋರದ ಉತ್ಸಾಹ, ಪರಸ್ಪರ ಹಿರಿಮೆ ಮತ್ತು ಗರಿಮೆಯ ಹೋರಾಟದಲ್ಲಿ ಸಂಸದರು ತೋರಿರುವುದು ದುರಂತ.

ದೇಶವನ್ನು ಒಗ್ಗೂಡಿಸುವಲ್ಲಿ ವಂದೇ ಮಾತರಂ ಹಾಡು ಮತ್ತು ಘೋಷಣೆಯದ್ದು ಮಹತ್ವದ ಪಾತ್ರವಾಗಿದೆ. ಆದರೆ ಅದು ಈಗ ವಾದ ವಿವಾದದ ವಿಷಯವಾಗಿಸುವ ಯತ್ನ ಮಾಡುತ್ತಿರುವುದು ಅದೆಷ್ಟು ಸೂಕ್ತ? ಇಂಥ ವಾಗ್ವಾಳಿಗಳನ್ನು ರೀಲ್ಸ್‌ಗಳಾಗಿ, ಮೀಮ್ಸ್‌ಗಳಾಗಿ ನೋಡುತ್ತಿರುವ ಯುವ ಜನಾಂಗಕ್ಕೆ ನಮ್ಮ ಪ್ರತಿನಿಧಿಗಳು ಎಂಥ ಸಂದೇಶವನ್ನು ರವಾನಿಸುತ್ತಿದ್ದಾರೆ? ಸಂಸತ್ತಿನಲ್ಲಿ ಜನಹಿತದ ಜಾರಿಗಾಗಿ ಯೋಜನೆಗಳನ್ನು ಮಾಡದೆಯೇ ಪರಸ್ಪರ ಕೆಸರು ಎರಚಿಕೊಳ್ಳುವುದರಲ್ಲಿ ಸಮಯ ಕಳೆಯುತ್ತಿದ್ದಾರೆ ಎಂದೆನಿಸದೆ? ಇಂಥ ಬೆಳವಣಿಗೆಗಳು ಮತದಾನದಿಂದಲೂ ಯುವಜನರು ಹಿಂದುಳಿಯುವಂತೆ ಮಾಡಬಹುದು.

ಈಗಾಗಲೇ ಮತದಾನದಲ್ಲಿ ಆಸಕ್ತಿ ಇರದ ಯುವ ಮತದಾರರಿಗೆ ಅದೊಂದು ಸಾರ್ವತ್ರಿಕ ರಜೆಯಾಗಿ ಕಾಣುತ್ತದೆ. ಇಂಥ ಚರ್ಚೆಗಳು, ವಾಗ್ವಾದಗಳು, ಪ್ರತಿಭಟನೆಗಳು, ಬಹಿಷ್ಕಾರಗಳು ಇವೆಲ್ಲವೂ ಇನ್ನಷ್ಟು ರೇಜಿಗೆಯನ್ನೇ ಹುಟ್ಟಿಸುತ್ತವೆ. ಉನ್ನತ ಶಿಕ್ಷಣ ಪಡೆದೂ ನಿರುದ್ಯೋಗಿಯಾಗಿರುವ ಪ್ರಜೆಗಳು, ಕೌಶಲವಿದ್ದೂ ಸ್ವಾವಲಂಬಿಯಾಗದ ಶಿಕ್ಷಿತರು, ಉದ್ಯೋಗಾರ್ಹತೆ ಇದ್ದೂ ಕೆಲಸ ಸಿಗದವರು, ಅದೆಷ್ಟು ಅಸಹಾಯಕತನ ಅನುಭವಿಸಬಹುದು? ತಮ್ಮ ಪ್ರತಿನಿಧಿಗಳು ತಮ್ಮ ಕಲ್ಯಾಣಕ್ಕಾಗಿ ಮಾತಾಡದೇ, ಹೊಸದೊಂದು ಯೋಜನೆಯನ್ನು ತಾರದೇ, ಕಾರ್ಪೊರೇಟ್ ಜಗತ್ತಿನ ದಲ್ಲಾಳಿಗಳಂತೆ ವರ್ತಿಸುವುದು ನೋಡಿದರೆ ಪ್ರಜಾಪ್ರಭುತ್ವದಲ್ಲಿನ ನಂಬಿಕೆ ಕಳೆದುಕೊಳ್ಳಬಹುದು.

ಸಂಸತ್ತಿನ ಅಧಿವೇಶನಗಳು, ವಿಧಾನ ಸಭೆಯ ಅಧಿವೇಶನಗಳು ಜನರ ಕಲ್ಯಾಣಕ್ಕಾಗಿ ಚರ್ಚಿಸಲು, ಮಥಿಸಲು. ಜನರ ಸುರಕ್ಷಿತ ಬದುಕಿಗಾಗಿ ಶ್ರಮಿಸಲು. ಈ ಕಾಲವನ್ನು ಪ್ರತಿಭಟಿಸಿ, ಬಹಿಷ್ಕರಿಸಿ ಹೊರನಡೆಯುವ, ಚರ್ಚೆಯಾಗದಂತೆ ಸಭೆಗಳ ವೇಳೆಯಲ್ಲಿ ತಡೆ ಒಡ್ಡುವುದು, ಜನರಿಗೆ ಅಪಮಾನವೆಸಗಿದಂತೆ. ಪ್ರಜೆಗಳ ಪ್ರಗತಿಯ ಚಿಂತನೆಯ ಸಮಯವನ್ನು ತಮ್ಮ ತಮ್ಮ ಲಾಭಕರ ವಾದಗಳಿಗೆ ಮೀಸಲಿಟ್ಟರೆ ಅದು ಮತದಾರರಿಗೆ ಮೋಸ ಮಾಡಿದಂತೆ. ಇಂಥವುಗಳು ಮರುಕಳಿಸದಂತೆ ನಮ್ಮ ಜನಪ್ರತಿನಿಧಿಗಳು ತಮ್ಮ ಆಯ್ಕೆಯನ್ನು ಸಮರ್ಥಿಸುವಂತೆ ಹೊಣೆಗಾರಿಕೆಯಿಂದ ವರ್ತಿಸಬೇಕಾಗಿದೆ. ಅದು ಈ ಹೊತ್ತಿನ ಜರೂರತ್ತಾಗಿದೆ.

■ ರಶ್ಮಿ ಎಸ್

**ಸಂಸತ್ತಿನಲ್ಲಿ ಕವಿತೆಯೊಂದನ್ನಿರಿಸಿಕೊಂಡು ಅತಿದೀರ್ಘ ಚರ್ಚೆಯಾಗಿದೆ. ಹತ್ತು ಗಂಟೆಗಳಷ್ಟು ಕಾಲ ಈ ಚರ್ಚೆಗೆ ಸಮಯವನ್ನು ವ್ಯಯ ಮಾಡಲಾಗಿದೆ. ಪ್ರಜಾ ಪ್ರತಿನಿಧಿಗಳು ಅಧಿವೇಶನದ ಸಮಯವನ್ನು ಜನಪರ ಮತ್ತು ಪ್ರಗತಿಪರ ಯೋಜನೆಗಳಿಗೆ ವಿನಿಯೋಗಿಸಬೇಕು. ಪ್ರತಿನಿಧಿಗಳ ಆತ್ಮಾವಲೋಕನಕ್ಕೆ ಇದು ಸಕಾಲ.**



ವಿಜಯ